# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ Shyam Prasad Mukherji Rurban Mission (SPMRM)/ National Rurban Mission (NRUM) ಯೋಜನೆಯ ಅನುಷ್ಠಾನದ ಪ್ರಭಾರವನ್ನು ವಹಿಸುವ ಕುರಿತು.

ಓದಲಾಗಿದೆ:
1. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳ ಅ.ಸ. ಪತ್ರ ಸಂಖ್ಯೆ: ಏ-110033/09/2015- Rurban, Dated: 27.10.2015 ರಲ್ಲಿ ನೀಡಿದ ಮಾರ್ಗಸೂಚಿ.
2. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 49 : ಸುಗ್ರಾಯೋ : 2015, ಬೆಂಗಳೂರು, ದಿನಾಂಕ: 21.12.2015
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ. & ಪಂ.ರಾ. ಇಲಾಖೆ. ಅನುಮೋದನೆ ಕೆಎಸ್‌ಆರ್‌ಎಲ್‌ಪಿಎಸ್/ಎಸ್‌ಪಿಎಂಆರ್‌ಎಂ/ಎನ್‌ಆರ್‌ಯುಎಂ/03/2016, ದಿನಾಂಕ: 01.06.2016,

*****

## ಪ್ರಸ್ತಾವನೆ:

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು Shyam Prasad Mukherji Rurban Mission (SPMRM)/ National Rurban Mission (NRUM) ಯೋಜನೆಯನ್ನು ರಾಷ್ಟ್ರಾದ್ಯಂತ ಆಯ್ದ ಪ್ರದೇಶದಲ್ಲಿ ಅನುಷ್ಠಾನಗೊಳಿಸುವ ಕುರಿತು ಮೇಲೆ ಓದಲಾದ (1)ರ ಪತ್ರದೊಂದಿಗೆ ಮಾರ್ಗಸೂಚಿಯನ್ನು ನೀಡಿರುತ್ತದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಷ್ಟ್ರಾದ್ಯಂತ ಆಯ್ದ ಗ್ರಾಮ ಸಮೂಹಗಳಲ್ಲಿ National Rurban Mission (NRUM) ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಹಲವು ಅಭಿವೃದ್ಧಿ ಯೋಜನೆಗಳನ್ನು ಒಗ್ಗೂಡಿಸಿ ರಾಜ್ಯದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮ ರೂಪಿಸಿದ್ದು, ಇದಕ್ಕಾಗಿ ರಾಜ್ಯಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ State Level Empowered Committee (SLEC) ಸಮಿತಿಯನ್ನು ಓದಲಾದ (2)ರಂತೆ ರಚಿಸಲಾಗಿದೆ ಮತ್ತು ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಸಂಜೀವಿನಿ) ಇವರನ್ನು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಹಾಗೆಯೇ, ಪ್ರಸ್ತುತ ರಾಜ್ಯದಲ್ಲಿ National Rurban Mission (NRUM) ಅನುಷ್ಠಾನಗೊಳಿಸಲು ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಸಂಜೀವಿನಿ) ಇವರು ಮಿಷನ್ ಲೀಡರ್, ರುರ್ಬನ್ ಮಿಷನ್ (NRUM) ಹುದ್ದೆಯ ಕಾರ್ಯಭಾರದಲ್ಲಿರುತ್ತಾರೆ.

ಪ್ರಸ್ತುತ ರಾಷ್ಟ್ರೀಯ ರುರ್ಬನ್ ಮಿಷನ್(NRuM) ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಸಿದ್ದತೆಯ ಹಂತದಲ್ಲಿದ್ದು ಅಭಿಯಾನ ನಿರ್ದೇಶಕರು, ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಇವರು ಉನ್ನತ ವ್ಯಾಸಂಗಕ್ಕಾಗಿ ಹೊರದೇಶದ ಹಾರ್‌ವಾರ್ಡ್ ವಿಶ್ವವಿದ್ಯಾಲಯಕ್ಕೆ ತೆರಳಬೇಕಿರುತ್ತದೆ ಹಾಗೂ ಅಭಿಯಾನ ನಿರ್ದೇಶಕರ ಹುದ್ದೆಯಿಂದ ಶ್ರೀಘ್ರದಲ್ಲಿ ಬಿಡುಗಡೆ ಹೊಂದಲಾಗುತ್ತಿದೆ.

ಈ ಹಿನ್ನಲೆಯಲ್ಲಿ ರುರ್ಬನ್ ಮಿಷನ್‌ನ್ನು ಅನುಷ್ಠಾನಗೊಳಿಸುವ ಸಂಬಂಧ, ಯೋಜನೆಯ ಸಮಗ್ರ ಕಾರ್ಯಭಾರವನ್ನು ಶ್ರೀ ಪಿ. ಶಿವಶಂಕರ್, ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಕೆಎಸ್‌ಆರ್‌ಎಲ್‌ಪಿಎಸ್/ಎಸ್‌ಪಿಎಂಆರ್‌ಎಂ/ಎನ್‌ಆರ್‌ಯುಎಂ/03/2016,**

ಬೆಂಗಳೂರು, ದಿನಾಂಕ: 17.06.2016

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜ್ಯದಲ್ಲಿ ರುರ್ಬನ್ ಮಿಷನ್‌ನ್ನು ಅನುಷ್ಠಾನಗೊಳಿಸುವ ಸಂಬಂಧ, ಯೋಜನೆಯ ಸಮಗ್ರ ಕಾರ್ಯಭಾರವನ್ನು ಶ್ರೀ ಪಿ. ಶಿವಶಂಕರ್, ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇವರಿಗೆ ವಹಿಸಲಾಗಿದೆ ಮತ್ತು ನಿರ್ದೇಶಕರು ಪಂಚಾಯತ್ ರಾಜ್ – 2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಮಿಷನ್ ಲೀಡರ್, ರುರ್ಬನ್ ಮಿಷನ್ (NRUM) ಹುದ್ದೆಯ ಹೆಚ್ಚುವರಿ ಕಾರ್ಯಭಾರದಲ್ಲಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಿ.ವಿ.ಸ್ವಾಮಿ) 17/6/16
**ಮಿಷನ್ ಲೀಡರ್,**
ರುರ್ಬನ್ ಮಿಷನ್ (NRuM), ಮತ್ತು
**ಅಭಿಯಾನ ನಿರ್ದೇಶಕರು**
"ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಕಪಾಲರು, (ಲೆಕ್ಕಪತ್ರ) /ಆಡಿಟ್ -1 / ಆಡಿಟ್ -2, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ, ಮುಖ್ಯ ಮಂತ್ರಿಗಳ ಕಾರ್ಯಲಯ, ಬೆಂಗಳೂರು.
3. ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾ.ಮತ್ತು ಪಂ. ರಾ. ಇಲಾಖೆ.
7. ನಿರ್ದೇಶಕರು, ಪಂಚಾಯತ್ ರಾಜ್-2, ಗ್ರಾ.ಮತ್ತು ಪಂ.ರಾಜ್ ಇಲಾಖೆ.
8. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.
9. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್, ರಾಜ್ಯ ಮಟ್ಟದ ಅಭಿಯಾನ ನಿರ್ದೇಶಕರು (ರುರ್ಬನ್ ಮಿಷನ್)
10. ರಾಜ್ಯದ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು (ನ), ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆ.
11. ಮುಖ್ಯ ಸ್ಥರು, ಗಣಕಕೋಶ, ಗ್ರಾ ಮತ್ತು ಪಂ ರಾಜ್ ಇಲಾಖೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.
12. ಸಂಪಾದಕರು, ಕರ್ನಾಟಕ ವಿಕಾಸ.
13. ಹೆಚ್ಚುವರಿ ಪ್ರತಿ / ರಕ್ಷಾ ಕಡತ.